Govt. of Karnataka [C.R.P. 67

Deposition Sheets (R.P. No. 57)

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ ,**

ಪ್ರಕರಣ ಸಂಖ್ಯೆ: **3946 /2022**

| | | | |
|---|---|---|---|
| ದಿನಾಂಕ: **19-01-2023** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
| ಸಿಡಬ್ಲ್ಯೂ: | 1 | ಪಿಡಬ್ಲ್ಯೂ | 1 |
| ಹೆಸರು | ತಿಪ್ಪೆಸ್ವಾಮಿ | | |
| ತಂದೆ / ಗಂಡನ ಹೆಸರು | ಈರಮಾದಪ್ಪ | | |
| ವಯಸ್ಸು | 42 | | |
| ಉದ್ಯೋಗ | ವ್ಯವಸಾಯ | | |
| ವಾಸ | ತಾವರೆಕೆರೆ | | |

ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:

ಮಾರನಗೆರೆ ಗೊಲ್ಲರಹಟ್ಟಿಯಲ್ಲಿ ಕುರಿಯನ್ನು ಕಾಯಲು ಒಂದು ಗುಡಿಸಲು ಮಾಡಿಕೊಂಡಿದ್ದೇವೆ. ಗುಡಿಸಲಲ್ಲಿ ಜಾಗ ಇಲ್ಲದ ಕಾರಣ ಕೆಎ-64-ಜೆ-7578 ನಂ. ನ ನನ್ನ ಬೈಕ್ ನ್ನು ಹೊರಗಡೆ ನಿಲ್ಲಿಸಿದ್ದೆ. ರಾತ್ರಿ ಯಾರೋ ಕಳ್ಳರು ಕಳ್ಳತನ ಮಾಡಿಕೊಂಡುಹೋಗಿರುತ್ತಾರೆ. ದಿ:16-09-2022 ರಂದು ಕಳ್ಳತನವಾಗಿರುತ್ತದೆ. ಯಾರು ಕಳ್ಳತನ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಆದರೆ ತಾವರೆಕೆರೆ ಪೋಲಿಸರು ಒಬ್ಬ ವ್ಯಕ್ತಿ ಹಾಗೂ ಬೈಕ್ ನ್ನು ತಂದು ತೋರಿಸಿದರು. ಅದೇ ದಿನ ನಾನು ದೂರನ್ನು ನೀಡಿರುತ್ತೇನೆ.

ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. 7 ದಿನಗಳ ನಂತರ ಪೋಲಿಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಮಹಜರ್ ನ್ನು ನಿಪಿ-2 ಎಂದು ,

ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಲಿಸರಿಗೆ ನಾನು ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಕುರಿ ಮೇಯಿಸಲು ಹೋದಾಗ ನಾನು ಬೈಕ್ ನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ. 16 ನೇ ತಾರೀಖು ನನ್ನ ಬೈಕ್ ಕಳ್ಳತನವಾಗಿರುತ್ತದೆ. ಅದೇ ದಿನ ದೂರು ನೀಡಿದ್ದೇನೆ. ನಾನು ದೂರು ನೀಡಿದ ದಿನ ಪೋಲಿಸರು ಸ್ಥಳಕ್ಕೆ ಬಂದಿದ್ದರು. ಪೋಲಿಸರು 16 ನೇ ತಾರೀಖು ಸ್ಥಳಕ್ಕೆ ಬಂದಿದ್ದರು. ಸಾಕ್ಷಿ ಮುಂದುವರೆದು ಪೋಲಿಸರು 24 ನೇ ತಾರೀಖು ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ಪೋಲಿಸರಿಗೆ ನಾನು 16 ತಾರೀಖು ಹೇಳಿಕೆಯನ್ನು ನೀಡಿದ್ದೇನೆ.

ಮೋಟಾರ್ ಬೈಕ್‌ನ ಟ್ಯಾಂಕ್ ಕವರ್ ನಲ್ಲಿದ್ದ ಕೀ ಪ್ಯಾಡ್ ಮೊಬೈಲ್ ಬೈಕ್ ನ್ನು ಕಳುವು ಮಾಡಿಕೊಂಡು ಹೋಗುವಾಗ ದಾರಿ ಮಧ್ಯ ಎಲ್ಲೋ ಬಿದ್ದು ಹೋಗಿದೆ ಎಂದು ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಸದರಿ ಮೊಬೈಲ್ ರಿಪೇರಿ ಮಾಡಿ 5-6 ತಿಂಗಳು ಆಗಿತ್ತು. ಸದರಿ ಮೊಬೈಲ್ ನ್ನು ನನ್ನ ಮಾವ ಬಳಕೆ ಮಾಡುತ್ತಿದ್ದರು , ಅದರ ನಂ. ಹೇಳಲಾಗುವುದಿಲ್ಲ. ಸದರಿಮೊಬೈಲ್ ನಂ. ನ್ನು ದೂರಿನಲ್ಲಿ ನಮೂದು ಮಾಡಿದೆಯೋ ಇಲ್ಲವೋ ಗೊತಿತಲ್ಲ . ನಾನು ಪೋಲಿಸರಿಗೆ ಹೇಳಿದ ಹೇಳಿಕೆಯಲ್ಲಿ ಸದರಿ ಮೊಬೈಲ್ ಗೆ ಹೊಸದಾಗಿ ಸಿಮ್ ಕಾರ್ಡ್ ಹಾಕಿಸಿ ಉಪಯೋಗಿ ಸಲು ನನ್ನ ಬೈಕ್ ಟ್ಯಾಂಕ್ ಕವರ್ ನಲ್ಲಿಟ್ಟಿದ್ದೆ ಎಂದು ಹೇಳಿಕೆ ನೀಡಿಲ್ಲ. ನಾನು ಬೈಕ್ ಓಡಿಸಿ ತಂದು , ಗುಡಿಸಲ ಮುಂದೆ ನಿಲ್ಲಿಸಿ , ಅದರ ಕೀ ಯನ್ನು ನನ್ನ ಜೇಬಿನಲ್ಲಿಟ್ಟುಕೊಂಡಿದ್ದೆ.

ಕುರಿರೊಪ್ಪದ ಬಳಿ ಶಬ್ದವಾದರೆ ನಮಗೆ ಗೊತ್ತಾಗುತ್ತದೆ ಎಂದರೆ ಸರಿ. ಆ ದಿನ ನಮ್ಮ ರೊಪ್ಪದ ಬಳಿ ಇದ್ದ ಬೈಕ್ ಕಳ್ಳತನವಾಗಿದ್ದರೆ ಶಬ್ದವಾಗಿ ನಮಗೆ ಗೊತ್ತಾಗಬೇಕಾಗಿತ್ತು ಎಂದರೆ ಸಾಕ್ಷಿಯು ನಾನು

ಮಲಗಿದ್ದೆ ಎಂದು ನುಡಿಯುತ್ತಾರೆ. ನಾನು ಕುರಿಕಾಯುವ ಕೆಲಸ ಮಾಡುತ್ತೇನೆ ಎಂದರೆ ಸರಿ. ನಮಗೆ ರೊಪ್ಪದಲ್ಲಿರುವ ಒಂದು ಕುರಿ ಶಬ್ದಮಾಡಿದರೂ ಎಚ್ಚರವಾಗುತ್ತದೆ ಎಂದರೆ ಸರಿ.

ಆ ದಿನ ನನ್ನ ಬೈಕ್ ಮತ್ತು ಮೊಬೈಲ್ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ . ಆ ದಿನ ಪೋಲಿಸರು ಸ್ಥಳಕ್ಕೆ ಬಂದಾಗ 9.30 ರಿಂದ 10.00 ಗಂಟೆಯಾಗಿತ್ತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.

Accused No. 6,9,14,15,19,23 absent.
EP filed allowed. Remaining accused present.
C.W.1 to 6 present. Examined as P.W.1 to 6 Ex. P-1, Ex.P -7, marked. Cw 1 to 6 material witness are turned hostile.
L/APP prays to issue summons to the other witnesses. Prayer rejected as no purpose will be served. The other prosecution witnesses are dropped. The evidence of prosecution is closed.
As no incriminating evidence appeared U/sec.313 of Cr.P.C is dispensed. Arguments heard.
Call on for judgment by: 01-06-2022.

ACJ. & JMFC, Sira.